ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಆ) ಇ) ಈ) ಡಾ. ಸರೋಜಿನಿ ಮಹಿಷಿ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿರುವ ಶಿಫಾರಸುಗಳನ್ನು ಪರಿಶೀಲಿಸಿ ಅವುಗಳ ಮಹತ್ವ ಮತ್ತು ಗಹನತೆಯನ್ನು ಪರಿಗಣಿಸಿ ಅವುಗಳನ್ನು ಶೀಘ್ರವಾಗಿ ಜಾರಿಗೊಳಿಸುವ ಕ್ರಮಂದ ಮೇಲ್ವಿಚಾರಣೆಗೋಸ್ಕರ ಮತ್ತು ಆ ಶಿಫಾರಸುಗಳಿಂದ ಉದ್ಭವಿಸಬಹುದಾದ ಇತರ ಅಂಶಗಳನ್ನು ಪರಿಶೀಲಿಸುದಕ್ಕೋಸ್ಕರ ಸರ್ಕಾರವು ಡಾ. ವಿ. ವೆಂಕಟೇಶ್, ಸಂಸತ್ ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ.

ಆರೋಗ್ಯ ಇಲಾಖೆಯಲ್ಲಿ ವಿವಿಧ ಹುದ್ದೆಗಳಿಗೆ ೧೯೮೬ರಲ್ಲಿ ಸಂದರ್ಶನ ನಡೆಸಿದ್ದುದರ ಬಗ್ಗೆ.

೧೭೬೧. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರದವರು ೧೯೮೬ರಲ್ಲಿ ಆರೋಗ್ಯ ಇಲಾಖೆಯಲ್ಲಿ ವಿವಿಧ ಹುದ್ದೆಗಳಿಗೆ ಸಂದರ್ಶನ ನಡೆಸಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಆಯ್ಕೆ ಮಾಡಿದ ಅಭ್ಯರ್ಥಿಗಳನ್ನು ಹುದ್ದೆಗೆ ನೇಮಿಸಿಕೊಳ್ಳಲಾಗಿದೆಯೇ ?

ಇ) ಇಲ್ಲದಿದ್ದಲ್ಲಿ ವಿಳಂಬಕ್ಕೆ ಕಾರಣವೇನು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಇಲಾಖಾ ನೇಮಕಾತಿ ಸಮಿತಿಯು ಈ ಕೆಳಕಂಡಂತ ಹುದ್ದೆಗಳಿಗೆ ಸಂದರ್ಶನ ನಡೆಸಿದೆ.

೧) ಔಷಧ ತಯಾರಕರು
೨) ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು
೩) ಎಕ್ಸರೆ ಟೆಕ್ನೀಷಿಯನ್
೪) ಅಸಿಸ್ಟೆಂಟ್ ಆಫ್‌ಸೆಟ್ ಪ್ರಿಂಟರ್ಸ್
೫) ಜೂನಿಯರ್ ಪ್ರೂಫ್ ಎಕ್ಸಾಮಿನರ್ಸ್
೬) ಕಂಪ್ಯೂಟರ್ ಸೆಕೆಂಡ್ ಡಿವಿಜನ್
೭) ಜೂನಿಯರ್ ಕಂಪೋಸಿಟರ್
೮) ಅಸಿಸ್ಟೆಂಟ್ ಬೈಂಡರ್ಸ್

ಆ) ನೇಮಿಸಿಕೊಳ್ಳಲಾಗಿದೆ.

ಇ) ಮೇಲಿನ (ಅ) ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದಕ್ಕೆ ಉತ್ತರವಿಲ್ಲ.

ಇನ್‌ಚಾರ್ಜ್ ಡಿ. ಎಸ್. ಪಿ. ಗಳ ಬಗ್ಗೆ.

೧೯೪೮. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಪೋಲೀಸ್ ಇಲಾಖೆಯಲ್ಲಿ ಇನ್‌ಚಾರ್ಜ್ ಡಿ. ಎಸ್. ಪಿ. ಗಳ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು ?

ಆ) ಇನ್‌ಚಾರ್ಜ್ ಡಿ. ಎಸ್. ಪಿ. ಗಳಿಗೆ ಮಾಮೂಲು ಡಿ. ಎಸ್. ಪಿ. ಗಳಿಗಿರುವ ಎಲ್ಲಾ ಅಧಿಕಾರಗಳನ್ನು ನೀಡಿದೆಯೇ ?

ಇ) ಇನ್‌ಚಾರ್ಜ್ ಹುದ್ದೆಗಳನ್ನು ಖಾಯಂ ಮಾಡದಿರಲು ಕಾರಣಗಳೇನು ?